ಉಳಿದಿವೆ. ಇದರ ಬಗ್ಗೆ ನಿಮ್ಮ ನಿಲುವು ಏನು? ಮಾನ್ಯ ಮುಖ್ಯಮಂತ್ರಿಗಳು ಸಂಘರ್ಷಕ್ಕಾದರೂ ಸಿದ್ಧ ಎನ್ನುವ ಭಾಷೆಯನ್ನು ಬಳಸಿದ್ದಾರೆ. ಈ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್:- ಯೋಜನೆಗಳು ಬಹಳ ಇವೆ. ವ್ಯಾಪ್ತಿ ಬಹಳ ಆಯಿತು.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ ದಿನಾಂಕ: 27-3-95 ರಂದು ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ :- ವಿದ್ಯುತ್ ಸಂಪರ್ಕ ನೀಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 101 (417)
ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮನೆಗಳಿಗೆ ಗೃಹಬಳಕೆಗಾಗಿ ಕೊಡುವ ವಿದ್ಯುತ್ ಜೋಡಣೆಯ ಸಂಪರ್ಕವನ್ನು ತೋರಿರುವ ಅರ್ಜಿಗಳಿಗೆ ನ್ಯಾಯಾಂಗದ ಆಕ್ಷೇಪ ಬಿಟ್ಟು ಬೇರೆ ಯಾರ ಆಕ್ಷೇಪ ಇದ್ದರೂ ಕಡ್ಡಾಯವಾಗಿ ಜೋಡಣೆ ಕೊಡಬೇಕೆಂದು ಕೆ.ಇ.ಬಿ. ಅಧಿಕಾರಿಗಳಿಗೆ ಆಜ್ಞೆಕೊಡಲು ಸರ್ಕಾರ ಬದ್ಧವಾಗಿದೆಯೇ?

ಶ್ರೀ ಜೆ.ಹೆಚ್. ಪಟೇಲ್
(ಉಪ ಮುಖ್ಯಮಂತ್ರಿಗಳು)

ಅ) ಗೃಹ ಬಳಕೆಗಾಗಿ ವಿದ್ಯುತ್ ಸಂಪರ್ಕವನ್ನು ಮಂಡಳಿಯು ಅರ್ಜಿದಾರರುಗಳಿಗೆ ನೀಡಬೇಕಾದರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವಿದ್ಯುತ್ ಸರಬರಾಜು ನಿಬಂಧನೆಗಳು 1988ರಲ್ಲಿ ತಿಳಿಸಿರುವ ಷರತ್ತುಗಳನ್ನು ಪಾಲಿಸಲೇಬೇಕು ಮತ್ತು ಅಗತ್ಯವಿರುವ ದಾಖಲೆಗಳನ್ನು ನೀಡಲೇಬೇಕಾಗುತ್ತದೆ. ಅರ್ಜಿದಾರನು ಸಂಬಂಧಿಸಿದ ಅಧಿಕಾರ ವರ್ಗದಿಂದ ನಿರಾಕ್ಷೇಪಣಾ ಪತ್ರ ಅಥವಾ ಮಂಜೂರಾದ ನಕ್ಷೆಯನ್ನು ಅರ್ಜಿಯ ಜೊತೆಗೆ ಮಂಡಳಿಗೆ ಸಲ್ಲಿಸಬೇಕಾಗಿದೆ. ಅಲ್ಲದೇ, ಮಂಡಳಿಯ ವಿದ್ಯುತ್ ಸರಬರಾಜು ನಿಬಂಧನೆಗಳು 1988ರ ಪ್ರಕಾರ ವಿದ್ಯುತ್ ಕೋರಿದ ಅರ್ಜಿದಾರನ ಮನೆಗೆ ಎಳೆಯುವ ಸರ್ವೀಸ್ ಲೈನು

ಬಗ್ಗೆ ಮಂಡಳಿಯು 12,46,500ರೂ.ಗಳನ್ನು ಅರಣ್ಯ ಇಲಾಖೆಯು ಶೀಘ್ರಗತಿಯಲ್ಲಿ ಮರ ಗಿಡಗಳನ್ನು ಕಡಿಯಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದೆ. ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ಈ ಕಾರ್ಯಕ್ಕೆ ಯಾವ ಅಡಚಣೆಯೂ ಇರುವುದಿಲ್ಲ. ಜೂನ್ 95ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ವಿಷಯ :- ಜವಾಹರ್ ರೋಜ್‌ಗಾರ್ ಯೋಜನೆಯ ಅನುಷ್ಠಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ106(440)

ಶ್ರೀ ಡಿ.ಆರ್. ಪಟೇಲ್ (ಗದ್‌ಗ್)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಜವಾಹರ್ ರೋಜ್‌ಗಾರ ಯೋಜನೆಯಡಿಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಒಂದು ವಿಚಕ್ಷಣಾ ಸಮಿತಿ ರಚಿಸಬೇಕೆಂದು ಈ ವಿಷಯದಲ್ಲಿ ಕೇಂದ್ರ ಸರ್ಕಾರದವರು ಮಾರ್ಗ ದರ್ಶನ ನೀಡಿರುವರೇ.

ಆ) ಹಾಗಿದ್ದಲ್ಲಿಪ್ರತಿ ಗ್ರಾಮಕ್ಕೊಂದು ವಿಚಕ್ಷಣಾ ಸಮಿತಿಗಳನ್ನು ನೇಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ.

ಇ) ಹಾಗಿಲ್ಲದಿದ್ದಲ್ಲಿ ಎಂದು ರಚಿಸಲಾಗುವುದು?

ಶ್ರೀ. ಎಂ.ಪಿ., ಪ್ರಕಾಶ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ನೀಡಿರುತ್ತಾರೆ.

ಆ) ಜವಾಹರ್ ರೋಜ್‌ಗಾರ್ ಯೋಜನೆಯ ಮ್ಯಾನ್ಯುಯಲ್‌ನಲ್ಲಿ ಸೂಚಿಸಿರುವಂತೆಈ ಸಮಿತಿಗಳನ್ನು ರಚಿಸಲು ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದೆ.